# 1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

| | | |
|---|---|---|
| ಸಾಕ್ಷಿಯ ಹೆಸರು | :- | ಸೋಮಶೇಖರ್ ಅಲಿಯಾಸ್ ಸೋಮ |
| ತಂದೆ/ ಗಂಡನ ಹೆಸರು | :- | ಪುಟ್ಟಸ್ವಾಮಿ |
| ವಯಸ್ಸು | :- | 35 ವರ್ಷ |
| ಉದ್ಯೋಗ | :- | ಡ್ರೈವರ್ |
| ವಾಸಸ್ಥಳ | :- | ಹೆಮ್ಮನಹಳ್ಳಿ |

(ಸಾಕ್ಷಿಗೆ ದಿನಾಂಕಃ 21-10-2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸುವಂತೆ ಕೋರಿದ್ದು ಸದರಿಯನ್ನು ಗುರುತಿಸಿದ್ದು ಸದರಿ ದಾಖಲೆ ಮಹಜರ್ ಆಗಿದ್ದು ಅದನ್ನು ನಿಪಿ- 2 ಎಂದು ಸಾಕ್ಷಿಯ ಸಹಿಯನ್ನು ಸದರಿಯನ್ನು ನಿಪಿ-2(ಎ ) ಎಂದು ಗುರುತಿಸಲಾಯಿತು. ಮದ್ದೂರಿನ ಪಾರೆಸ್ಟ್ ಬಳಿಯಲ್ಲಿ ಸಹಿ ಪಡೆದಿದ್ದು ಸದರಿ ನಿಪಿ- 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಸಹಿಯನ್ನು ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದು ಅದರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ನನ್ನೊಂದಿಗೆ ಬೇರೆ ಯಾರೂ ಸಹಿ ಮಾಡಿಲ್ಲ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು ಅದರಲ್ಲಿ ನಾನು ಇರುವುದಾಗಿ ಹೇಳಿದ್ದು ಸದರಿ ಪೋಟೋವನ್ನು ಪೊಲೀಸರು ತೆಗೆದಿದ್ದು ಏಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಪೋಟೋವನ್ನು ನಿಪಿ- 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 02-11-2019 ರಂದು ಬೆಳಿಗ್ಗೆ 10.15 ರಿಂದ 10.45 ರ ಸಮಯದಲ್ಲಿ ಕೃತ್ಯ ನಡೆದ ಸ್ಥಳವನ್ನು ಚಾಸಾ- 1 ರವರು ತೋರಿಸಲಾಗಿ ನಿಮ್ಮ ಮತ್ತು ಚಾಸಾ- 2 ರವರ ಸಮಕ್ಷಮ ನಿಪಿ- 2

ರಂತೆ ಮಹಜರ್ ಜರುಗಿಸಿ ನನಗೆ ಓದಿ ಹೇಳಿ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ಅದರಂತೆ ನಿಪಿ- 3 ರಂತೆ ಪೋಟೋ ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ- 2 ರಲ್ಲಿ ಬರೆದಿರುವ ವಿಚಾರ ಓದಿ ಹೇಳಲಾಗಿ ನಿರಾಕರಿಸಿದ್ದು ಸದರಿ ವಿಚಾರ ನಿಮಗೆ ಗೊತ್ತಿದ್ದರೂ ಕೂಡ ನಾನು ಆರೋಪಿಗಳಿಗೆ ಸಹಾಯವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಏನು ಇಲ್ಲವೆಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು